# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1353** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭಾ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **18-12-2025** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು.** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಭಯೋತ್ಪಾದಕರು, ಗೋಲ್ಡ್ ಸ್ಮಗ್ಲರ್ಸ್ ಹಾಗೂ ಅತ್ಯಾಚಾರಿ ಕೈದಿಗಳಿಗೆ ವಿಶೇಷ ರಾಜಾತಿಥ್ಯ ವ್ಯವಸ್ಥೆ ನಿರಂತರವಾಗಿ ಸಿಗುತ್ತಿರುವ ಕುರಿತು ವಿಡಿಯೋಗಳು ವೈರಲ್ ಆಗಿದ್ದು, ಕಾರಾಗೃಹ ವಿರುದ್ಧ ನಾಗರೀಕ ಸಮಾಜದಿಂದ ತೀವ್ರತರವಾದ ಆಕ್ರೋಶ ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 1. ದಿನಾಂಕ: 08.11.2025 ಮತ್ತು 09.11.2025ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳು ಮದ್ಯದ ಪಾರ್ಟಿ, ನೃತ್ಯ, ಮೊಬೈಲ್ ಫೋನ್ ಬಳಕೆ, ಸೇರಿದಂತೆ ಅನೇಕ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದಾಗಿ ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ಪ್ರಕರಣಗಳ ಕುರಿತು, ಈ ಕೆಳಕಂಡಂತೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಸೂಕ್ತ ಕಾನೂನು ಕ್ರಮವನ್ನು ಜರುಗಿಸುವ ಸಂಬಂಧ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. |
| (ಆ) | ಬಂದಿದ್ದಲ್ಲಿ, ಭಯೋತ್ಪಾದಕರು ವಂಚಕರು ಮತ್ತು ಅತ್ಯಾಚಾರಿಗಳು ಜೈಲಿನ ಒಳಗೇ ಇದ್ದುಕೊಂಡು ಎಲ್ಲಾ ರೀತಿಯ ವಿಧದ ಮೋಜು, ಮಸ್ತಿ ಮಾಡುತ್ತಾ ಬಿಂದಾಸ್ ಜೀವನ ನಡೆಸುತ್ತಿದ್ದರೂ ಇದರ ವಿರುದ್ಧ ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು; | |

| ಕ್ರ. ಸಂ. | ಪ್ರಕರಣ ಸಂಖ್ಯೆ & ದಿನಾಂಕ | ಷರಾ |
|---|---|---|
| 1 | NCR. No: 050/2025, ದಿನಾಂಕ: 08.11.2025 | Cr. No: 0331/2025 ದಿನಾಂಕ: 20.11.2025 |
| 2 | NCR. No: 051/2025 ದಿನಾಂಕ: 08.11.2025 | Cr. No: 0332/2025 ದಿನಾಂಕ: 20.11.2025 |
| 3 | NCR. No: 052/2025 ದಿನಾಂಕ: 08.11.2025 | Cr. No: 0333/2025 ದಿನಾಂಕ: 20.11.2025 |
| 4 | NCR. No: 053/2025 ದಿನಾಂಕ: 08.11.2025 | Cr. No: 0334/2025 ದಿನಾಂಕ: 20.11.2025 |
| 5 | Cr. No: 0321/2025 ದಿನಾಂಕ: 10.11.2025 | - |

2. ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಂದ ಮದ್ಯ ತಯಾರಿಕೆ / ಕಾರಾಗೃಹದಲ್ಲಿ ವೈನ್ ತಯಾರಿಕೆ ಎಂಬ ಶೀರ್ಷಿಕೆಯಡಿ ದಿನ ಪತ್ರಿಕೆಗಳಲ್ಲಿ ದಿನಾಂಕ: 27.11.2025ರಂದು ಪ್ರಕಟವಾದ ಸುದ್ದಿಯ ಕುರಿತು ಕೂಲಂಕಷವಾಗಿ ಪರಿಶೀಲಿಸಿ, ವಿಚಾರಣೆಯನ್ನು ನಡೆಸಿ, ಪ್ರಾಥಮಿಕ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಕಾರಾಗೃಹಗಳ ಉಪ ಮಹಾನಿರೀಕ್ಷಕರು, ದಕ್ಷಿಣ ವಲಯ, ಬೆಂಗಳೂರು ರವರಿಗೆ ಸೂಚಿಸಿದ್ದು, ಸದರಿಯವರಿಂದ ವರದಿ ಸ್ವೀಕೃತವಾದ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು.

| | | |
|---|---|---|
| (ಇ) | ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಈ ರೀತಿಯ ಅಕ್ರಮ ಚಟುವಟಿಕೆಗಳು ಅವಿರತವಾಗಿ ನಡೆಯುತ್ತಿರುವ ಮಾಹಿತಿ ಇದ್ದರೂ, ಅದನ್ನು ತಡೆಯಲು ಸರ್ಕಾರ ಇದುವರೆಗೆ ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸಂಪೂರ್ಣವಾಗಿ ವಿಫಲವಾಗಿರುವುದಕ್ಕೆ ಕಾರಣಗಳೇನು; | ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶ್ರೀ ಆರ್ ಹಿತೇಂದ್ರ,, ಭಾ.ಪೊ.ಸೇ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಕಾನೂನು ಮತ್ತು ಸುವ್ಯವಸ್ಥೆ) ರವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ, ಸಮಿತಿಯು ಒಂದು ತಿಂಗಳೊಳಗಾಗಿ ವರದಿಯನ್ನು ಸಲ್ಲಿಸಲು ಸರ್ಕಾರವು ಆದೇಶವನ್ನು ಹೊರಡಿಸಿರುತ್ತದೆ. ಸಮಿತಿಯು ವರದಿಯನ್ನು ಸಲ್ಲಿಸಿದ ನಂತರ ತಪ್ಪಿತಸ್ಥ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಕಾನೂನು ಮತ್ತು ಶಿಸ್ತು ಕ್ರಮ ಜರುಗಿಸಲಾಗುವುದು. |
| (ಈ) | ಹಣದ ಆಸೆಗೆ ಜೈಲು ಅಧಿಕಾರಿಗಳೇ ಕೈದಿಗಳ ಜೊತೆ ಶಾಮೀಲಾಗಿದ್ದು, ಈ ರೀತಿಯ ರಾಜ್ಯಾತಿಥ್ಯ ಕೈದಿಗಳಿಗೆ ಸಿಗಲು ಸಂಪೂರ್ಣವಾಗಿ ಅವರೇ ಕಾರಣರಾಗಿದ್ದು, ಅಂತಹ ಎಷ್ಟು ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಇದುವರೆಗೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಒಟ್ಟು 06 ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |

**ಸಂಖ್ಯೆ: ಹೆಚ್‌ಡಿ 373 ಪಿಆರ್‌ಎ 2025**

**( ಡಾ: ಜಿ.ಪರಮೇಶ್ವರ )**
ಗೃಹ ಸಚಿವರು.

## ಅನುಬಂಧ-1

| ಕ್ರ ಸಂ | ಆರೋಪಿತ ಅಧಿಕಾರಿ/ ಸಿಬ್ಬಂದಿಯ ವಿವರ | ವರ್ಷ/ ಎಫ್ಐಆರ್ ಸಂಖ್ಯೆ | ಪ್ರಕರಣದ ಸಂಕ್ಷಿಪ್ತ ವಿವರ |
|---|---|---|---|
| 1 | ಶ್ರೀ ಗಂಗಾಧರ ಹೆಬ್ಬಳ್ಳಿ, ಪ್ರಥಮ ದರ್ಜೆ ಸಹಾಯಕರು | ಮೊ.ಸಂ.36/2022ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ1894 (ಕಲಂ-42) ಐ.ಪಿ.ಸಿ,1860 ಕಲಂ 424,ಎನ್ ಡಿ ಪಿಎಸ್ ಕಾಯ್ದೆ 1985 ಕಲಂ 8(ಸಿ), 21(ಬಿ), 21(ಸಿ),22(ಬಿ), 22(ಸಿ), 18(ಬಿ) | ದಿನಾಂಕ: 02.02.2022 ರಂದು ಕರ್ತವ್ಯಕ್ಕೆ ಹಾಜರಾಗುವಾಗ ಬೆಂಗಳೂರು ಕೇಂದ್ರ ಕಾರಾಗೃಹದೊಳಗೆ ಅಕ್ರಮವಾಗಿ ಮಾದಕ ವಸ್ತುಗಳನ್ನು ಸರಬರಾಜು ಮಾಡಲು ಪ್ರಯತ್ನಿಸಿದ ಬಗ್ಗೆ. |
| 2 | ಶ್ರೀ ಭಾನುಪ್ರಕಾಶ್, ವಾಹನ ಸ್ವಚ್ಛಕರು | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ದಿನಾಂಕ:25.07.2023 ರಂದು **ಮೊ.ಸಂ 0302/2023**, ಐ.ಪಿ.ಸಿ 1860 ಕಲಂ 424, ಕರ್ನಾಟಕ ಕಾರಾಗೃಹ (ತಿದ್ದುಪಡಿ)ಕಾಯ್ದೆ-2022 ಕಲಂ 42ರಡಿಯಲ್ಲಿ ಪ್ರಕರಣ ದಾಖಲಾಗಿದೆ. | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದಿನಾಂಕ: 25-07-2024 ರಂದು ಮೊಬೈಲ್ ಫೋನನ್ನು ಗುಪ್ತವಾಗಿಟ್ಟುಕೊಂಡು ಕಾರಾಗೃಹದೊಳಗೆ ಸಾಗಿಸಲು ಪ್ರಯತ್ನಿಸಿದ ಪ್ರಕರಣ. |
| 3 | ಶ್ರೀಮತಿ ನವ್ಯಶ್ರೀ, ಸೈಕಿಯಾಟ್ರಿಕ್ ಕೌನ್ಸಿಲರ್ | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೊ.ಸಂ:0178/2025 ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 , ಬಿಎನ್ಎಸ್ 2023 ಕಲಂ 323 | ದಿನಾಂಕ: 13-06-2025 ರಂದು ಶ್ರೀಮತಿ ನವ್ಯಶ್ರೀ, ಸೈಕಿಯಾಟ್ರಿಕ್ ಕೌನ್ಸಿಲರ್ ಇವರು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಕರ್ತವ್ಯಕ್ಕೆ ಹಾಜರಾಗುವಾಗ ನಿಷೇಧಿತ ವಸ್ತುವನ್ನು ಸರಬರಾಜು ಮಾಡಲು ಪ್ರಯತ್ನಿಸಿದ ಪ್ರಕರಣ |
| 4 | ಕಲ್ಲಪ್ಪ ಹುಬಚಿ, ವೀಕ್ಷಕರು | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಯಲ್ಲಿ ದಿನಾಂಕ:08.09.2025ರಂದು ಮೊ.ಸಂ.241 2025 ಎನ್ ಡಿ ಪಿಎಸ್ ಆಕ್ಟ್ 1985 ಕಲಂ 21(ಬಿ)ಬಿ ಎನ್ ಎಸ್ - 2023 ಕಲಂ 323, ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದಿನಾಂಕ: **07.09.2025** ರಂದು ಕರ್ತವ್ಯಕ್ಕೆ ಹಾಜರಾಗುವಾಗ ಹ್ಯಾಶ್ ಆಯಿಲ್ ರೀತಿಯ ನಿಷೇಧಿತ ಮಾದಕ ವಸ್ತುಗಳನ್ನು ಸಾಗಿಸಲು ಪ್ರಯತ್ನಿಸಿದ ಪ್ರಕರಣ |
| 5 | ಶ್ರೀ ಅಮರ್ ಪ್ರಾಂಜೆ, ವೀಕ್ಷಕರು | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಯಲ್ಲಿ ದಿನಾಂಕ:08.09.2025ರಂದು ಮೊ.ಸಂ. 241/2025ಬಿ ಎನ್ ಎಸ್ -2023 ಕಲಂ 323, ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ **ದಿನಾಂಕ:23.10.2025** ರಂದು ಕರ್ತವ್ಯಕ್ಕೆ ಹಾಜರಾಗುವಾಗ ನಿಷೇಧಿತ ವಸ್ತುಗಳನ್ನು ಸಾಗಿಸಲು ಪ್ರಯತ್ನಿಸಿದ ಪ್ರಕರಣ |
| 6 | ಶ್ರೀ ರಾಹುಲ್ ಪಾಟೀಲ್, ವೀಕ್ಷಕರು | ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಯಲ್ಲಿ ಮೊ.ಸಂ.0293/2025 ಬಿಎನ್ ಎಸ್ -2023 ಕಲಂ 323,ಕರ್ನಾಟಕ ಕಾರಾಗೃಹ (ತಿದ್ದುಪಡಿ) ಕಾಯ್ದೆ-2022 ಕಲಂ 42 | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದಿನಾಂಕ:04-12-2025 ರಂದು ಕರ್ತವ್ಯಕ್ಕೆ ಹಾಜರಾಗುವಾಗ ಕೆಎಸ್ಐಎಸ್ಎಫ್ ಸಿಬ್ಬಂದಿಗಳು ತಪಾಸಣೆ ಸಮಯದಲ್ಲಿ 02 ಪ್ಯಾಕ್ ಸಿಗರೇಟ್ ಪ್ಯಾಕೇಟ್ ಮತ್ತು 60ಗ್ರಾಂ ನಿಷೇಧಿತ ರೀತಿಯ ತೆಳುವಾದ ಪೇಪರ್ ತರಹದ ವಸ್ತು ಕಂಡುಬಂದಿದ್ದು, ಸದರಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. |